# ಸ್ವಾಮಿ ರಂಗನಾಥಾನಂದರೊಡನೆ ಕೆಲವು ರಸನಿಮಿಷಗಳು


◆ ಪ್ರೊ. ಎನ್. ಕೃಷ್ಣಸ್ವಾಮಿ

ಸ್ವಾಮಿ ರಂಗನಾಥಾನಂದರೊಡನೆ ಕುಳಿತು ಮಾತನಾಡುವ ಅನೇಕ ಸಂದರ್ಭಗಳು ನನಗೆ ಅಪೂರ್ವ ಆನಂದವನ್ನು ತಂದಿವೆ. ಅವರ ವ್ಯಕ್ತಿತ್ವದ ಹಿರಿಮೆ ನನ್ನ ಕಣ್ಮುಂದೆ ಬೆಳಗುವಂತೆ ಮಾಡುವುದರಿಂದ ಅವುಗಳನ್ನು ಓದುಗರೊಂದಿಗೆ ಹಂಚಿಕೊಳ್ಳುವ ಒಂದು ಪ್ರಯತ್ನ ಇದು.

**ವಿದ್ಯಾರ್ಥಿ ಸಭೆ:**

ಸುಮಾರು ೧೯೪೭ರ ಕಾಲ. ಸ್ವಾಮಿ ರಂಗನಾಥಾನಂದಜಿ (ಇನ್ನು ಅವರನ್ನು 'ಸ್ವಾಮಿಜಿ' ಎಂದೇ ಸಂಬೋಧಿಸುತ್ತೇನೆ) ಕೆಲವು ದಿನ ಬೆಂಗಳೂರಿಗೆ ಬಂದಿದ್ದರು. ಬೆಂಗಳೂರಿನ ಭಕ್ತರಿಗೆ ಸಂಭ್ರಮದ ದಿನಗಳು. ಸ್ವಾಮಿಜಿಗೂ ಬೆಂಗಳೂರಿನ ಮೇಲೆ ವಿಶೇಷ ಪ್ರೇಮ. ಕರಾಚಿಯಲ್ಲಿ ಸ್ವಾಮಿಜಿ ಒಂದು ಜನಪ್ರಿಯ ಆಶ್ರಮ ಸ್ಥಾಪಿಸಿ, ನಡೆಸುತ್ತಿರುವರೆಂದೂ, ಅವರ ಭಾಷಣಗಳನ್ನು ಕೇಳಲು ನೂರಾರು ಜನ ಬರುತ್ತಾರೆಂದೂ ಕೇಳಿ ನಮಗೆಲ್ಲ ಸಂತೋಷ. ಅಲ್ಲಿ ಅವರು ಆಗಾಗ ಪಾಕಿಸ್ತಾನದ ಅಧ್ಯಕ್ಷ ಮಹಮದಾಲಿ ಜಿನ್ನಾ ಅವರನ್ನೂ ನೋಡಿ, ಅವರೊಡನೆ ಮಾತನಾಡುತ್ತಾರೆ ಎಂದು ಕೇಳಿ ವಿಸ್ಮಯ—ಏಕೆಂದರೆ ಆ ಕಾಲದಲ್ಲಿ ಜಿನ್ನಾ ನನ್ನ ಸ್ನೇಹಿತ ಎಂದು ಹೇಳಬಲ್ಲವರು ಇಬ್ಬರೇ—ಒಬ್ಬರು ಮಹಾತ್ಮ ಗಾಂಧಿ, ಇನ್ನೊಬ್ಬರು ನಮ್ಮ ಸ್ವಾಮಿಜಿ!

ಅದು ಹಾಗಿರಲಿ. ಒಂದು ದಿನ ನನ್ನ ಮಿತ್ರ ಪಿ. ಕೇಶವ ಮೂರ್ತಿಯೊಡನೆ ಮಲ್ಲೇಶ್ವರದಿಂದ ನಡೆದುಕೊಂಡೇ ಆಶ್ರಮಕ್ಕೆ ಹೋಗಿ ಸ್ವಾಮಿಜಿಯನ್ನು ಸಂಧಿಸಿದೆ. ನಾವಿಬ್ಬರೂ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳೆಂದು ಕೇಳಿ ತಿಳಿದು ಅವರು "ನೀವು ಬೆಂಗಳೂರಿನ ವಿದ್ಯಾರ್ಥಿಗಳ ಒಂದು ಸಭೆ ಏರ್ಪಡಿಸಿ. ನಾನು ಅವರನ್ನು ಉದ್ದೇಶಿಸಿ ಭಾಷಣ ಮಾಡುತ್ತೇನೆ" ಎಂದರು. ನಮಗೆ ಉತ್ಸಾಹವೇನೋ ಇತ್ತು, ಆದರೆ ಇಂತಹ ಕಾರ್ಯ ನಾವು ಎಂದೂ ಮಾಡಿರಲಿಲ್ಲ—ಇದು ಹೇಗೆ ಆಗುತ್ತದೆಯೋ, ಎಂಬ ಆತಂಕ. ಧೈರ್ಯ ತಂದುಕೊಂಡು ಕಾಂಗ್ರೆಸ್ ಆಫೀಸಿಗೆ ಹೋಗಿ ಕಾರ್ಯದರ್ಶಿ—ವೀರಣ್ಣ ಗೌಡರು, ಎಂದು ನೆನಪು—ಅವರನ್ನು ಕಂಡು ಸ್ವಾಮಿಜಿಯ ಸಭೆಗೆ ಕಾಂಗ್ರೆಸ್ ಭವನವನ್ನು ಒಂದು ಸಂಜೆ ನಮಗೆ ಕೊಡಬೇಕೆಂದು ಕೇಳಿಕೊಂಡೆವು. ಅವರು "ಏನಪ್ಪಾ ನಿಮ್ಮ ಸ್ವಾಮಿಜಿ ನಮ್ಮ ಯುವಕರನ್ನೆಲ್ಲಾ ಸಂನ್ಯಾಸಿಗಳನ್ನಾಗಿ ಮಾಡುವುದಿಲ್ಲ ತಾನೆ?"



ಎಂದು ಹೇಳಿ ಒಪ್ಪಿಗೆ ಕೊಟ್ಟರು.

ಸಭೆ ಬಹು ಚೆನ್ನಾಗಿ ನಡೆಯಿತು. ಕಾಲೇಜಿನಲ್ಲಿ ಕರಪತ್ರ ಹಂಚುವುದನ್ನು ಬಿಟ್ಟರೆ ಬೇರೆ ಯಾವ ಪ್ರಚಾರವನ್ನೂ ಮಾಡದಿದ್ದರೂ ಸಭಾಭವನ ಕಾಲೇಜು ವಿದ್ಯಾರ್ಥಿಗಳಿಂದ ತುಂಬಿತ್ತು. ಸ್ವಾಮಿಜಿ ಉತ್ಸಾಹಭರಿತ ಭಾಷಣ ಮಾಡಿ ಯುವಕರಿಗೆ ಸ್ಫೂರ್ತಿ ತಂದರು. ಸ್ವಾಮಿಜಿಗೂ ಸಂತೋಷವಾಯಿತು. ಆಮೇಲೆ ಅವರು ಈ ಸಭೆಯ ವಿಷಯವನ್ನು ಕರಾಚಿಯ ಸ್ಟೂಡೆಂಟ್ ಕಾಂಗ್ರೆಸ್ ಕಾರ್ಯದರ್ಶಿಗೆ ಬರೆದು ತಿಳಿಸಿ ಎಂದರು. ಆತನಿಗೂ ಸಂತೋಷವಾಯಿತು.

ಈ ಸಂದರ್ಭದಲ್ಲಿ ಇನ್ನೊಂದು ವಿಷಯ ನಮಗೆ ಕುತೂಹಲ ಉಂಟುಮಾಡಿತ್ತು—ಕರಾಚಿ ಆಶ್ರಮದಲ್ಲಿ ಸ್ವಾಮಿಜಿಯೊಡನೆ ಇದ್ದ ಬ್ರಹ್ಮಚಾರಿಗಳೆಲ್ಲ ಬೆಂಗಳೂರು–ಮೈಸೂರಿನವರೇ. ಒಬ್ಬರು ಮಾತ್ರ ಆಂಧ್ರದ ಸ್ವಾಮಿ ಸರ್ವಗತಾನಂದರು. ಉಳಿದ ಎಂಟು ಹತ್ತು ಜನ ಎಲ್ಲ ನಮಗೆ ತಿಳಿದವರೇ. ಇವರ ಪೈಕಿ ಈಗ ಹೈದರಾಬಾದಿನಲ್ಲಿರುವ ಸ್ವಾಮಿ ಅನನ್ಯಾನಂದರು, ಬೇಲೂರು ಮಠದಲ್ಲಿರುವ ಸ್ವಾಮಿ ಮುಖ್ಯಾನಂದರನ್ನು ಬಿಟ್ಟರೆ ಉಳಿದವರೆಲ್ಲ ಈಗ ನಮ್ಮೊಡನೆ ಇಲ್ಲ. ಸ್ವಾಮಿ ಸರ್ವಗತಾನಂದರು ಬಾಸ್ಟನ್ ವೇದಾಂತ ಕೇಂದ್ರದ ನಿವೃತ್ತ ಮುಖ್ಯಸ್ಥರು.



ಸ್ವಾಮಿ ರಂಗನಾಥಾನಂದಜಿಯವರ ಜೀವನದಲ್ಲಿನ ಪ್ರೇರಣಾದಾಯಕ ಘಟನೆಗಳನ್ನು ಸ್ಮರಿಸಿರುವ ಶ್ರೀ ಕೃಷ್ಣಸ್ವಾಮಿ ಅವರು ಬೆಂಗಳೂರು ರಾಮಕೃಷ್ಣ ಮಠದ ಅತ್ಯಂತ ನಿಕಟ ಭಕ್ತರು ಮತ್ತು ಶೈಕ್ಷಣಿಕ ಸೇವೆಯಲ್ಲಿ ನಿರತರು.

**ಬಾಲ್ಯದ ಒಂದು ಘಟನೆ:**

ಸ್ವಾಮಿಜಿ ಕೇರಳದ ಶಾಲೆಯಲ್ಲಿ ಓದುತ್ತಿದ್ದಾಗ ಒಂದು ದಿನ ಅವರ ಬಾಯಿಂದ ಒಂದು ಕೆಟ್ಟ ಮಾತು ಬಂದಿತು. ಅದನ್ನು ಕೇಳಿದ ಅವರ ತಾಯಿ, "ಶಂಕರಾ. ನಿನ್ನ ನಾಲಗೆಯಲ್ಲಿ ಸರಸ್ವತಿ ನೆಲಸಿದ್ದಾಳೆ, ಅದರಲ್ಲಿ ಕೆಟ್ಟ ಮಾತು ಬರಬಾರದು" ಎಂದರು. ಸ್ವಾಮಿಜಿ ಹೇಳಿದರು: "ಆಮೇಲೆ ನಾನು ಎಂದೂ ಕೆಟ್ಟ ಮಾತು ಆಡಲಿಲ್ಲ." ಅದು ಮಾತ್ರ ಅಲ್ಲ. ಅವರು ಎಂದೂ ಯಾರನ್ನೂ ಬಯ್ಯಲಿಲ್ಲ, ಹೀಗಳೆಯಲಿಲ್ಲ. ಹೈದರಾಬಾದಿನ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದಾಗ ಅವರು ಅಲ್ಲಿ ಒಂದು ಹೊಸ ಆಚರಣೆಯನ್ನು ಜಾರಿಗೆ ತಂದರು. ಎಲ್ಲ ರಾಮಕೃಷ್ಣ ಮಠಗಳಲ್ಲಿಯೂ ಊಟದ ಮನೆಯಲ್ಲಿ ಶ್ರೀಮಾತೆ ಶಾರದಾದೇವಿಯವರ ಚಿತ್ರ ಪ್ರಧಾನವಾಗಿರುತ್ತದೆ. ಅವರೇ ತಮ್ಮ ಮಕ್ಕಳ ಊಟದ ಮೇಲ್ವಿಚಾರಣೆ ನಡೆಸುವವರು. ಹೈದರಾಬಾದಿನ ಮಠದಲ್ಲಿ ಸ್ವಾಮಿಜಿ ಶ್ರೀಮಾತೆಯ ಪಠದ ಕೆಳಗೆ ಅವರ ಒಂದು ಶ್ರೀವಚನವನ್ನು ದೊಡ್ಡಕ್ಷರಗಳಲ್ಲಿ ಬರೆಸಿದರು. ಇದೇ ಶ್ರೀಮಾತೆ ನೀಡಿದ ಕೊನೆಯ ಉಪದೇಶ. ಅವರು ಹೇಳಿದ್ದಾರೆ: "ನಿನಗೆ ಮನಶ್ಶಾಂತಿ ಬೇಕಿದ್ದರೆ ಯಾರಲ್ಲಿಯೂ ತಪ್ಪು ಹುಡುಕ ಬೇಡ, ನಿನ್ನ ತಪ್ಪುಗಳನ್ನೇ ನೋಡಿಕೋ. ಮಗು, ಯಾರೂ ನಿನಗೆ ಪರಕೀಯರಲ್ಲ, ಈ ಜಗತ್ತಿನ ಜನರೆಲ್ಲ ನಿನ್ನವರೇ." ಆ ಮಠದಲ್ಲಿ ಊಟಕ್ಕೆ ಮೊದಲು ಎಲ್ಲರೂ ಒಟ್ಟಿಗೆ ಶ್ರೀಮಾತೆಯ ಕಡೆಯ ಸಂದೇಶವನ್ನು ಹೇಳಿ ನಂತರವೇ ಮಂತ್ರವನ್ನು ಹೇಳಿ ಊಟಮಾಡುವ ಪದ್ಧತಿಯನ್ನು ಸ್ವಾಮಿಜಿ ಏರ್ಪಡಿಸಿದರು.

**ಮೈಸೂರಿನಲ್ಲಿ:**

೧೯೨೬ರಲ್ಲಿ ಸ್ವಾಮಿಜಿ ಮೈಸೂರು ರಾಮಕೃಷ್ಣ ಆಶ್ರಮದಲ್ಲಿ ಬ್ರಹ್ಮಚಾರಿ ಆಗಿ ಸೇರಿದರು. ಅವರೇ ಆ ಆಶ್ರಮದ ಅಡುಗೆಯವರು, ಕಸಮುಸುರೆ ಕೆಲಸ ಮಾಡುವವರು. ಮುಂದೆ ಆಶ್ರಮದ ಹಾಸ್ಟೆಲ್‌ನಲ್ಲಿ ವಾರ್ಡನ್ ಆದರು, ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಸಿದ್ದೇಶ್ವರಾನಂದರ ಅಚ್ಚುಮೆಚ್ಚಿನ ಸಹಾಯಕರಾದರು. ಅಲ್ಲಿ ಅವರಿಗೆ ಹಾಸ್ಯ ಸಾಹಿತಿ ನಾ.ಕಸ್ತೂರಿ, ಕವಿ ಕುವೆಂಪು, ನಾಟಕಕಾರ ಕೈಲಾಸಂ ಮೊದಲಾದ ಅನೇಕರ ಪರಿಚಯ ಆಯಿತು. ಈ ಸಂದರ್ಭದಲ್ಲಿ ಸ್ವಾಮಿಜಿ ಆಗಾಗ ನೆನೆಸಿಕೊಳ್ಳುತ್ತಿದ್ದ ಎರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ.

ಸ್ವಾಮಿಜಿ ೧೯೩೩ರಲ್ಲಿ ಬೇಲೂರು ಮಠಕ್ಕೆ ಹೋಗಿ ತಮ್ಮ ಗುರುಗಳಾದ, ಶ್ರೀಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಶಿವಾನಂದರಿಂದ ಸಂನ್ಯಾಸ ದೀಕ್ಷೆ ಪಡೆದು ಸ್ವಾಮಿ ರಂಗನಾಥಾನಂದ ಎಂಬ ಹೊಸ ಹೆಸರನ್ನು ಪಡೆದರು. ಮೈಸೂರಿಗೆ ಹಿಂದಿರುಗಿದ ಮೇಲೆ ಆತ್ಮೀಯರಾಗಿದ್ದ ನಾ. ಕಸ್ತೂರಿ ಸ್ವಾಮಿಜಿಯವರಿಗೆ ಹೇಳಿದರು, "ಸ್ವಾಮಿಜಿ, ಇಷ್ಟು ದಿನ ನಾವು ನಿಮ್ಮನ್ನು ಶಂಕರ್ ಮಹರಾಜ್ ಎಂದು ಕರೆಯುತ್ತಿದ್ದೆವು. ಈಗ ನೀವು ಸನ್ಯಾಸಿಯಾಗಿ ರಂಗನಾಥಾನಂದರಾಗಿದ್ದೀರಿ. ಮುಂದೆ ನಿಮ್ಮನ್ನು ಹೇಗೆ ಸಂಬೋಧಿಸಬೇಕು?" ಮುಂದುವರಿದು ಅವರೇ ಹೇಳಿದರು, "ಇನ್ನು ಮೇಲೆ ನೀವು ಓಡಾಡುವಾಗ ನಿಮ್ಮನ್ನು ಶಂಕರ್ ಮಹಾರಾಜ್ ಎಂದು ಕರೆಯುತ್ತೇವೆ, ಮಲಗಿರುವಾಗ ರಂಗನಾಥಾನಂದ ಎಂದು ಕರೆಯುತ್ತೇವೆ." ರಂಗನಾಥಸ್ವಾಮಿ ಯಾವಾಗಲೂ ಮಲಗಿಯೇ ಇರುತ್ತಾನೆ ಅಲ್ಲವೇ!

**ಕೈಲಾಸಂ ಕಥೆ**

ಕೈಲಾಸಂ ಮೈಸೂರು ಆಶ್ರಮಕ್ಕೆ ಆಗಾಗ ಬರುತ್ತಿದ್ದರು. ಮಾತನಾಡುತ್ತಿರುವಾಗ ಆಗಾಗ ಹೊರಗೆ ಹೋಗಿ ಬರುತ್ತಿದ್ದರು—ಸಿಗರೇಟು ಸೇವನೆಗಾಗಿ. ವಿಚಾರಿಸಿದರೆ "ಪರಮಹಂಸರು ಮಹಾನುಭಾವರು, ಅವರ ಎದುರಿಗೆ ಸಿಗರೇಟು ಸೇದುವುದುಂಟೆ? ಅವರು ಒಂದು ಸಲ ನನ್ನ ಮಾನ ಉಳಿಸಿದರು" ಎಂದು ಹೇಳಿ, ಅದರ ಕಥೆ ಹೇಳಿದರು.

'ಟೊಳ್ಳು ಗಟ್ಟಿ' ನಾಟಕ. ಇನ್ನೂ ನಾಯಕ ರಾಮಣ್ಣನ ಪಾತ್ರಧಾರಿ ಬಂದಿರಲಿಲ್ಲ—ಇನ್ನೇನು ಬಂದುಬಿಡುತ್ತಾನೆ ಎಂಬ ಸಮಾಚಾರ ಬಂದಿತು. ಜನರ ಗದ್ದಲ ಜಾಸ್ತಿ ಆಯಿತು. ಆಗ ಪರದೆ ಎತ್ತಿಸಿ ಕೈಲಾಸಂ ತಮ್ಮ ಪಾತ್ರದಲ್ಲಿ ಪ್ರವೇಶಿಸಿಬಿಟ್ಟರು—ಅವರದು ಎಂದಿನಂತೆ ವಿತಂತುವಿನ ಪಾತ್ರ. ಮುದುಕಿ ಕೆಂಪು ಸೀರೆ ತಲೆಯಮೇಲೆ ಹೊದ್ದು "ಹತ್ತಿರದಲ್ಲಿ ಎಲ್ಲಾದರೂ ಹಾಳು ಭಾವಿ ಇದೆಯೇ?" ಎಂದು ಹೇಳುತ್ತಾ ಪ್ರವೇಶಿಸಿದರೆ ಸಭೆ ಎಲ್ಲಾ ನಿಶ್ಶಬ್ದ. ಆಗ ಏನು ಮಾತು ಹೇಳುವುದು? ಕೈಲಾಸಂಗೆ ರಾಮಕೃಷ್ಣರ ಕಥೆ ಒಂದು ಜ್ಞಾಪಕಕ್ಕೆ ಬಂತು. ಅದನ್ನೇ ಕಾಲು ಘಂಟೆ ಹೇಳಿ ಮುಗಿಸುವ ಹೊತ್ತಿಗೆ ರಾಮಣ್ಣನ ಪಾತ್ರಧಾರಿ ಬಂದಿದ್ದ. ನಾಟಕ ಸರಾಗವಾಗಿ ಮುಂದುವರಿಯಿತು. ಕೈಲಾಸಂ ಮಾನ ಉಳಿಯಿತು.

ಆಗ ಕೈಲಾಸಂ ಹೇಳಿದ ಕಥೆ ಹೀಗಿದೆ: ಶ್ರೀರಾಮ ಪಂಪಾ ಸರೋವರದ ಹತ್ತಿರ ಲಕ್ಷ್ಮಣನೊಡನೆ ಸೀತಾನ್ವೇಷಣೆ ಮಾಡುತ್ತಾ ಬಂದ. ತುಂಬ ಬಾಯಾರಿದ್ದ. ಬಿಲ್ಲು-ಬಾಣಗಳನ್ನು ಕುಕ್ಕಿ ಸರೋವರದ ಬಳಿ ಹೋಗಿ ನೀರು ಕುಡಿದ. ಆದರೆ ಹಿಂದಿರುಗಿ ಬಂದು ನೋಡಿದಾಗ ಅವನಿಗೆ ಪರಿತಾಪ ಆಯಿತು—ಅವನ ಬಿಲ್ಲು ಒಂದು ಕಪ್ಪೆಗೆ ತಗುಲಿ ಅದು ಪ್ರಾಣ ಬಿಡುತ್ತಾ ಇದೆ. ರಾಮ ಆಗ, "ಏನಪ್ಪಾ, ಬಡಪಾಯಿ, ನಾನು ಬಿಲ್ಲು ಬಾಣ ಎತ್ತಿಹಾಕುವಾಗ ಏನಾದರೂ ಕೂಗಿಕೊಳ್ಳಬಾರದಾಗಿತ್ತೆ, ಅನ್ಯಾಯವಾಗಿ ಏಟು ತಿಂದೆಯಲ್ಲಾ" ಎಂದ. ಕಪ್ಪೆ ಹೇಳಿತು, "ಅಯ್ಯಾ, ರಾಮ, ನನ್ನ ಜೀವನದಲ್ಲೆಲ್ಲಾ ಕಷ್ಟ ಬಂದಾಗ 'ರಾಮ, ಕಾಪಾಡಪ್ಪ' ಎಂದು ಕೂಗಿಕೊಳ್ಳುತ್ತಿದ್ದೆ. ಈಗ ರಾಮನೇ ನನ್ನ ಮೇಲೆ ಕೈಎತ್ತಿದಾಗ ನಾನು ಯಾರನ್ನು ಕರೆಯಲಿ?" ಎಂದಿತಂತೆ. (ಇದು ಶ್ರೀರಾಮಕೃಷ್ಣರು ಹೇಳು

ತ್ರಿದ್ಸ ಕಥೆ) ಹಾಗೆ ಕೈಲಾಸಂ ಪಾತ್ರ ಧರಿಸಿದ್ದ ಆ ಮುದುಕಿ ತನ್ನ ಮಗನೇ ಹೆಂಡತಿ ಜೊತೆ ಸೇರಿಕೊಂಡು ತನಗೆ ತೊಂದರೆ ಕೊಡುತ್ತಿದ್ದರೆ, ತಾನು ಯಾರನ್ನು ಆಶ್ರಯಿಸಲಿ, ಎಂದೇ 'ಆಳವಾದ ಹಾಳು ಭಾವಿ ಹುಡುಕುತ್ತಿದ್ದಾಳೆ!'

ಈ ಕಥೆ ಸ್ವಾಮಿಜಿಗೆ ತುಂಬಾ ಇಷ್ಟವಾಗಿತ್ತು. ಇದನ್ನು ಅವರಿಂದ ಕೇಳಿ ನಾನು ಅದನ್ನು ಒಂದು ಪತ್ರಿಕೆಯಲ್ಲಿ ಪ್ರಕಟಿಸಿ ಅವರಿಗೂ ಒಂದು ಪ್ರತಿ ಕಳುಹಿಸಿದೆ. ಅವರು ಅದನ್ನು ಓದಿ ಅದರಲ್ಲಿದ್ದ ಒಂದು ತಪ್ಪನ್ನು ನನ್ನ ಗಮನಕ್ಕೆ ತಂದರು. ಅವರಿಗೆ ಕನ್ನಡದ ಮೇಲೆ ಬಹು ಅಭಿಮಾನ.

**ಕನ್ನಡದ ಗರೀಬ**

ಒಂದು ಸಲ ದೆಹಲಿಯ ಹತ್ತಿರ ಒಂದು ಊರಿನಲ್ಲಿ ಸ್ವಾಮಿಜಿ ಹಿಂದಿಯಲ್ಲಿ ಮಾತನಾಡಬೇಕಾಯಿತು. ಭಾಷಣದಲ್ಲಿ ಅವರು 'ಬಡವ' ಎಂಬ ಪದ ಉಪಯೋಗಿಸಬೇಕಾಗಿತ್ತು; ಹಿಂದಿ ಪದ ಗರೀಬ, ಎಂಬುದು ಮರೆತುಹೋಯಿತು. ಅವರ ಮನಸ್ಸಿಗೆ ಹೊಳೆದದ್ದು ಬಡವ, ಎಂಬ ಕನ್ನಡ ಪದ. ಅದನ್ನೇ ಉಪಯೋಗಿಸಿ ಮುಂದೆ ಹೋದರು. ಇಲ್ಲಿ ನಾವು ಗಮನಿಸ ಬೇಕಾದ ವಿಷಯ ಏನೆಂದರೆ ಅವರಿಗೆ ತಮ್ಮ ಮಾತೃಭಾಷೆ ಯಾದ ಮಲೆಯಾಳಂ ಮಾತು ನೆನಪಿಗೆ ಬರಲಿಲ್ಲ. ನೆನಪಾ ದದ್ದು ಕನ್ನಡದ 'ಬಡವ'!

**ಆಶ್ರಮದ ಭಕ್ತಾದಿಗಳಿಗೆ ಸಂದೇಶ**

ಒಮ್ಮೆ ಬೆಂಗಳೂರು ಆಶ್ರಮದ ಭಕ್ತಾದಿಗಳ ಮಧ್ಯೆ ಕೆಲವು ಸಮಸ್ಯೆಗಳು ತಲೆದೋರಿದವು. ನಾವು ಕೆಲವರು ಹೈದರಾ ಬಾದಿಗೆ ಹೋಗಿ, ಅಲ್ಲಿನ ಮಠದಲ್ಲಿ ಆಗ ರಾಮಕೃಷ್ಣ ಮಹಾ ಸಂಘದ ಉಪಾಧ್ಯಕ್ಷರಾಗಿದ್ದ ಸ್ವಾಮಿ ರಂಗನಾಥಾನಂದಜಿ ಅವರಲ್ಲಿ ಪರಿಹಾರಕ್ಕಾಗಿ ಕೋರಿದೆವು. ಪೂಜ್ಯ ರಂಗನಾಥಾ ನಂದಜಿ ತಾವು ಭಕ್ತಾದಿಗಳಿಗೆ ಹೇಳಬೇಕಾದ ಹಿತನುಡಿಯನ್ನು ಒಂದು ಸಂದೇಶದ ಮೂಲಕ ಧ್ವನಿಸುರುಳಿಯಲ್ಲಿ ರೆಕಾರ್ಡ್ ಮಾಡಿ ಕೊಟ್ಟರು. ಆ ಧ್ವನಿಸುರುಳಿಯನ್ನು ಬೆಂಗಳೂರಿನಲ್ಲಿ ಭಕ್ತರ ಸಭೆಯೊಂದನ್ನು ಕರೆದು ಎಲ್ಲರಿಗೂ ಕೇಳಿಸಿದೆವು. ಅದನ್ನು ಬರಹದಲ್ಲಿಯೂ ಎಲ್ಲರಿಗೂ ಹಂಚಿದೆವು. ಅದರ ಪರಿಣಾಮ ಬಹು ಯಶಸ್ವಿ ಆಯಿತು. ಆ ಸಂದೇಶದಲ್ಲಿ ಸ್ವಾಮಿಜಿಯವರಿಗೆ ಬೆಂಗಳೂರು ಆಶ್ರಮದ ಮೇಲಿದ್ದ ವಿಶೇಷ ಮಮತೆ ವ್ಯಕ್ತವಾಗುವುದರಿಂದ ಅವರ ಸಂದೇಶದ ಸ್ವಲ್ಪ ಭಾಗವನ್ನು ಇಲ್ಲಿ ಮತ್ತೆ ನೆನಪಿಸಿಕೊಳ್ಳುತ್ತೇನೆ:

"ಇಂದು ಏಪ್ರಿಲ್ ೩೦, ತಿಂಗಳ ಕೊನೆಯ ದಿನ. ಬೆಂಗಳೂರಿನ ರಾಮಕೃಷ್ಣ ಆಶ್ರಮದ ಭಕ್ತರು ಇಲ್ಲಿಗೆ ಬಂದಿದ್ದಾರೆ. ಇಂದು ಸಂಜೆ ಬೆಂಗಳೂರಿಗೆ ಹಿಂದಿರುಗುತ್ತಾರೆ.

"...ಸೌಹಾರ್ದ ಬೆಳೆಯಲಿ. ಶಾಂತಿ ಸೌಹಾರ್ದಕ್ಕಾಗಿ ದುಡಿಯುವವರು ನಿಜವಾದ ಭಕ್ತರು. ನಾನು ಬೆಂಗಳೂರಿನಲ್ಲಿ ನೋಡಿರುವ ಭಕ್ತಿ ಇಂತಹ ಭೇದ ಮೊದಲಾದವುಗಳಿಗೆ ಕಾರಣ—ಜ್ಞಾನದಿಂದ ದೃಢವಾಗದ ಭಕ್ತಿ, ಬರಿಯ ಭಕ್ತಿ ಅಪಾಯಕಾರಿ. ಹಿಂದೆ ಅದು ಇದ್ದಿತು. ಅದರಿಂದ ನಾವು ಬಲಹೀನರಾಗುತ್ತ ಬಂದೆವು. ಹೆಚ್ಚು ಭೇದಭಾವ, ಜನರಲ್ಲಿ ಒಡಕುಗಳು, ಮಾನಸಿಕ ವಿಭಜನೆಗಳು ಹುಟ್ಟಿದವು. ಆದರೆ ಜ್ಞಾನ ಜೊತೆಯಲ್ಲಿದ್ದರೆ ಎಲ್ಲ ಚೆನ್ನಾಗಿರುತ್ತದೆ. ಇಂದು ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಭಕ್ತಿ-ಜ್ಞಾನ-ಸಮನ್ವಯವನ್ನು ಒತ್ತಿಹೇಳಿದ್ದಾರೆ. ಇದರಿಂದ ಆಧ್ಯಾತ್ಮಿಕ ಪ್ರಗತಿ, ಸರ್ವತೋಮುಖ ಪ್ರಗತಿ ಆಗುವುದು. ನಮ್ಮ ಭಕ್ತರೆಲ್ಲ ಇದನ್ನು ತಿಳಿಯಲಿ. ಶಾಂತಿ ಸೌಹಾರ್ದ ಇರಲಿ.

"ಇಲ್ಲಿಗೆ ಬಂದಿರುವವರ ಮೂಲಕ ದೂರದ ಬೆಂಗಳೂರಿ ನಲ್ಲಿರುವವರಿಗೆ ನನ್ನ ಪ್ರೀತಿ, ಆಶೀರ್ವಾದಗಳನ್ನು ತಿಳಿಸು ತ್ತಿದ್ದೇನೆ. ನನಗೆ ಬೆಂಗಳೂರಿನಲ್ಲಿ ಹೆಚ್ಚು ಆಸಕ್ತಿ. ಮೂರು ವರ್ಷಗಳು ನಾನು ಅಲ್ಲಿನ ಆಶ್ರಮದಲ್ಲಿ ಇದ್ದೆ. ಅದಕ್ಕೆ ಮೊದಲು ಐದು ವರ್ಷಗಳು ಕೋರ್ಟ್ ವ್ಯವಹಾರ ನಡೆ ದಿದ್ದಿತು. ೧೯೩೫ರಲ್ಲಿ ಬೆಂಗಳೂರು ಆಶ್ರಮ ಮತ್ತೆ ಬೇಲೂರು ಮಠಕ್ಕೆ ಹಿಂದಿರುಗಿದಾಗ ನಾನು ಹಂಗಾಮಿ ಅಧ್ಯಕ್ಷನಾಗಿ ಬೆಂಗಳೂರು ಆಶ್ರಮದ ಅಧಿಕಾರ ಕೈಗೊಂಡೆ. ಆಮೇಲೆ ಅಲ್ಲಿಯೇ ಸಹಾಯಕನಾಗಿ ಮುಂದುವರಿದೆ. ಆದುದರಿಂದ ಬೆಂಗಳೂರು ಮತ್ತು ಮೈಸೂರು ನನಗೆ ಬಹಳ ಪ್ರಿಯ. ಬೆಂಗಳೂರು ಆಶ್ರಮ ಹೊಳೆಯಲಿ, ಸುಂದರವಾಗಿರಲಿ ಎಂದು ನನ್ನ ಆಸೆ. ಈಗಾಗಲೇ ಬೆಂಗಳೂರಿಗೆ ಪ್ರಚಂಡ ವಾದ ಹೆಸರು ಇದೆ. ಮಿಷನ್ನಿನಲ್ಲೆಲ್ಲಾ ಬೆಂಗಳೂರಿನ ಕೆಲಸಕ್ಕೆ ಗೌರವವಿದೆ. ಆದುದರಿಂದ ನಮ್ಮ ಭಕ್ತರು ಒಗ್ಗಟ್ಟಾಗಿ ಕೆಲಸ ಮಾಡಲಿ. ವಿರೋಧ ಬೇಡ...

"ಬೆಂಗಳೂರಿನ ಭಕ್ತರೆಲ್ಲರೂ ನನ್ನ ಪ್ರೀತಿ, ಆಶೀರ್ವಾದ ಗಳನ್ನು ಸ್ವೀಕರಿಸಲಿ. ಧನ್ಯವಾದಗಳು. ಅದರಲ್ಲೂ ಬೆಂಗಳೂರಿ ನಿಂದ ಇಲ್ಲಿಯವರೆಗೆ ಬಂದಿರುವ ಭಕ್ತಾದಿಗಳ ತಂಡಕ್ಕೆ ಧನ್ಯವಾದಗಳು. ಅವರು ಈ ಕ್ಯಾಸೆಟ್ಟಿನ ಮೂಲಕ ಒಂದು ಸುಂದರ ಸಂದೇಶವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ನನಗೆ ಅಲ್ಲಿಗೆ ಬರಲಾಗುವುದಿಲ್ಲ. ಈ ಕ್ಯಾಸೆಟ್ ನನ್ನನ್ನು ಅಲ್ಲಿಗೆ ಕರೆದೊಯ್ಯುತ್ತದೆ. ಅದರ ಮೂಲಕ, ಅದರ ಶಬ್ದದ ಮೂಲಕ ನೀವು ನನ್ನನ್ನು ಕಾಣುವಿರಿ. ನಿಮಗೆ ಎಲ್ಲರಿಗೂ ನನ್ನ ನಮಸ್ಕಾರ. ಶುಭಮಸ್ತು."

**ಅವರ ನೆನಪು**

ಇನ್ನೂ ಅನೇಕ ನೆನಪುಗಳು ನಾ ಮುಂದು, ತಾ ಮುಂದು ಎಂದು ಒತ್ತಿಕೊಂಡು ಬರುತ್ತಿವೆ. ಅವನ್ನೆಲ್ಲ ಹೇಳಲು ಇಲ್ಲಿ ಸ್ಥಳ ಇಲ್ಲ. ಆದರೆ ಈಗ ಸ್ವಾಮಿಜಿ ನಮ್ಮೊಡನೆ ಇಲ್ಲ ದಿದ್ದರೂ ಅವರ ಹಲವಾರು ಪುಸ್ತಕಗಳು, ನೂರಾರು ಕ್ಯಾಸೆಟ್, ಸಿ.ಡಿ.ಗಳ ಮೂಲಕ ಅವರ ನೆನಪು ಸದಾ ನಮ್ಮೊಡನೆ ಇದ್ದು, ಸ್ಫೂರ್ತಿ ಕೊಡುತ್ತವೆ. ಇದು ಒಂದು ಅಮೂಲ್ಯ ಆಸ್ತಿ.

*